ಪ್ಲಾನ್. ನನಗೂ ಮನಸ್ಸಿನ ಒಂದು ಮೂಲೆಯಲ್ಲಿ ಕೊರೆಯುತ್ತಿತ್ತು – ಈ ರಾಕೇಶ್ ನಿಜ ಹೇಳುತ್ತಿದ್ದಾನಾ ಅಂತಾ... ಈಗ ಎಲ್ಲ ಕ್ಲಿಯರ್. ಕೃಷ್ಣನ್ ಅವರ ಕೊಲೆಯ ಆಪಾದನೆ ಮೇರೆಗೆ ನಿಮ್ಮಿಬ್ಬರನ್ನು ಅರೆಸ್ಟ್ ಮಾಡುತ್ತಿದ್ದೇವೆ.'

'ಸರ್, ನಾನು ನಿರಪರಾಧಿ. ನನಗೇನೂ ತಿಳಿದಿಲ್ಲ. ಈ ವಿಲ್, ಹಣಕಾಸಿನ ಬಗ್ಗೆ ನನಗೇನೂ ತಿಳಿದಿಲ್ಲ. ನನ್ನ ತಪ್ಪು ಇವಳನ್ನು ಅತೀವವಾಗಿ ಪ್ರೀತಿಸಿದ್ದು... ಅಷ್ಟೇ' ರಾಕೇಶ್ ಕುಸಿದು ಬೀಳುತ್ತಾ ಹೇಳಿದ.

'ಸರ್, ನಮಗೆ ನಿಜವಾಗಿಯೂ ಈ ವಿಲ್ ಬಗ್ಗೆ ತಿಳಿದಿರಲಿಲ್ಲ. ನಾವು ಈ ಕೊಲೆ ಮಾಡಿಲ್ಲ. ನಮ್ಮನ್ನು ನಂಬಿ' ಕೃಷ್ಣನ್ ಪತ್ನಿ ಅಳಲು ಪ್ರಾರಂಭಿಸಿದಳು. ಅಲ್ಲಿಯವರೆಗೆ ತೋರುತ್ತಿದ್ದ ದರ್ಪ, ದುರಹಂಕಾರ ಎಲ್ಲ ಹೊರಟು ಹೋಗಿತ್ತು.

ಮುಂದಿನ ಕೆಲಸ ಮಾಡಿರೆಂದು ಅಲ್ಲಿದ್ದವರಿಗೆ ಹೇಳಿ ಅವರಿಬ್ಬರನ್ನು ಕರೆದುಕೊಂಡು ಹೊರಟ ನಾಗೇಶ್.

ಅಷ್ಟರಲ್ಲಿ ರಾಕೇಶನ ಫೋನ್ ರಿಂಗ್ ಆಯಿತು. ಯಾವುದೊ ಗೊತ್ತಿಲ್ಲದ ನಂಬರ್! ತೆಗೆದುಕೊಳ್ಳಲಾ ಎಂದು ತಲೆ ಎತ್ತಿ ಕೇಳಿದ ನಾಗೇಶ್‌ಗೆ.

'ಹಲೋ ಯಂಗ್ ಮ್ಯಾನ್' ಆಕಡೆಯಿಂದ ಬಂತು ದನಿ.

ಅದು ಕೃಷ್ಣನ್ ದನಿ!

ಗಾಬರಿಯಿಂದ ಹತ್ತಿರದಲ್ಲಿದ್ದ ಗೋಡೆಗೆ ಒರಗಿದ ರಾಕೇಶ್.

'ಗಾಬರಿಯಾದೆಯಾ ಯಂಗ್ ಮ್ಯಾನ್? ಅಲ್ಲಿ ಸತ್ತು ಬಿದ್ದಿರುವ ವ್ಯಕ್ತಿ ಇಲ್ಲಿ ಫೋನ್‌ನಲ್ಲಿ ಹೇಗೆ ಮಾತಾಡುತ್ತಿದ್ದಾನೆ ಅಂತ? ಇದೇ ತಂತ್ರಜ್ಞಾನದ ವಿಶೇಷತೆ. ಈ ಸಮಯಕ್ಕೆ ಈ ಆಡಿಯೋ ನಿನ್ನ ಫೋನ್‌ನಲ್ಲಿ ಬರುವ ಹಾಗೆ ಸೆಟ್ ಮಾಡಿದ್ದೇನೆ. ಈ ಹೊತ್ತಿಗೆ ನೀನು ಮತ್ತು ಅವಳು ಪೊಲೀಸರ ಕೈಗೆ ಸಿಕ್ಕಿಹಾಕಿಕೊಂಡಿರಬೇಕಲ್ಲ? ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ... ಯಾಕೆಂದರೆ ಸಾಯುವ ಹದಿನೈದು ನಿಮಿಷದ ಮೊದಲು ನಾನೇ ಪೊಲೀಸರಿಗೆ ಫೋನ್ ಮಾಡಿದ್ದೆ. ನೀನು ನನ್ನ ಸಾವು ನೋಡಿ ಹೆದರಿ ಓಡಿ ಹೋಗುವ ಮೊದಲು ಅವರು ಬಂದಿರಬೇಕಲ್ಲವಾ?'

ರಾಕೇಶ್ ಬೆವರತೊಡಗಿದ. ಅವನ ಬಾಯಿಯಿಂದ ಯಾವ ಮಾತುಗಳೂ ಹೊರಡದಂತಾಯಿತು. ಕೃಷ್ಣನ್‌ನ ಮಾತುಗಳು ಮುಂದುವರೆದಿದ್ದವು...

'ಇದೆಲ್ಲ ಹೀಗೆಯೇ ನಡೆಯುತ್ತದೆ ಅಂತಾ ಹೇಗೆ ಯೋಚಿಸಿದೆ ಅಂದುಕೊಳ್ಳುತ್ತಿರುವೆಯಾ? ಚದುರಂಗದ ಆಟದಲ್ಲಿ ಒಂದು ನಡೆ ನಡೆಸಬೇಕಾದರೂ ಎದುರಾಳಿ ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಾನೆ, ಅದರಿಂದ ನಮ್ಮ ಮುಂದಿನ ನಡೆಗಳನ್ನು ಹೇಗೆ ಬದಲಾವಣೆ ಮಾಡಿಕೊಳ್ಳಬೇಕು, ಅದಕ್ಕೆ ಅವನ ಪ್ರತಿನಡೆ ಏನು ಎನ್ನುವುದನ್ನು ಊಹಿಸಿ ನಮ್ಮ ಕಾಯಿಗಳನ್ನು ಮುಂದೆ ನಡೆಸಬೇಕಾಗುತ್ತದೆ. ಅದೇರೀತಿ, ಕಡೆಯಲ್ಲಿ ಹೀಗೆಯೇ ಆಗಬೇಕೆಂದೇ ಮೊದಲಿನಿಂದ ನನ್ನ ನಡೆಗಳನ್ನು ನಡೆಸುತ್ತಾ ಬಂದೆ.

ನೀನು ನಿರಪರಾಧಿ ಎಂದು ಪೊಲೀಸರಿಗೆ ನಂಬಿಸಲು ಬೇಕಾದ ಯಾವ ಸಾಕ್ಷಿಗಳೂ ಇಲ್ಲ. ನಿನಗೆ ಬರಹೇಳಿದೆ ಎಂದು ಪ್ರೂವ್ ಮಾಡಲು, ನನ್ನ ಆ ಕಾಲ್ ವಿವರಗಳು ಇಲ್ಲ. ಬ್ಯಾಂಕ್‌ನಲ್ಲಿ ನಿನ್ನ ಖಾತೆಗೆ ಐದು ಕೋಟಿ ಹಣ ಜಮಾ ಆಗಿದೆ ಎಂದು ಬಂದಿದ್ದು ನಕಲಿ ಮೆಸೇಜ್. ಅವರಿಗೆ ಸಿಕ್ಕ ಇನ್ನೊಂದು ಬುಲೆಟ್ ಅವರ ಸಂಶಯ ಜಾಸ್ತಿ ಮಾಡುತ್ತದೆ. ಅದಲ್ಲದೆ, ನನ್ನ ಲಾಯರ್‌ಗೆ